# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಲಗ್ಗೆರೆ ಉಪವಿಭಾಗ

## ಕೊಟ್ಟಿಗೆಪಾಳ್ಯ ವಾರ್ಡ್ ಸಮಿತಿ ಸಭೆ

ದಿನಾಂಕ 07.11.2020 ರಂದು ಬೆಳಗ್ಗೆ 11.00 ಗಂಟೆಗೆ ಶ್ರೀ ವಿಜಯ ಕುಮಾರ್, ಮುಖ್ಯ ಅಭಿಯಂತರರು, ಸಮಿತಿ ಅಧ್ಯಕ್ಷರು ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಕೆಗಳು.

ಕಾರ್ಯಸೂಚಿ ವಿಷಯಗಳು:-

ವಾರ್ಡ್-73ರ ಸಾರ್ವಜನಿಕರ ಕುಂದುಕೊರತೆಗಳು ಹಾಗೂ ವಾರ್ಡ್ ಅಭಿವೃದ್ಧಿ ಕುರಿತಂತೆ ಚರ್ಚಿಸಲು ಹಾಗೂ ನಿರ್ಣಯಿಸಲು.

<u>ಸಭೆಗೆ ಹಾಜರಿದ್ದ ಅಧಿಕಾರಿಗಳು:-</u>

ಶ್ರೀ ವಿಜಯ ಕುಮಾರ್, ಮುಖ್ಯ ಅಭಿಯಂತರರು ರಾರಾನಗರ, ಶ್ರೀ. ನವೀನ್ ಆರ್, ಸಹಾಯಕ ಅಭಿಯಂತರರು, ಕೊಟ್ಟಿಗೆಪಾಳ್ಯ ವಾರ್ಡ್, ಶ್ರೀ ವಿನಾಯಕ ದತ್ತಾ ನಾಯ್ಕ್ ಎ.ಇ, (ಬಿ ಡ್ಬ್ಲೂ ಎಸ್ ಎಸ್, ಬಿ), ಚನ್ನೇಗೌಡ, ಸಹಾಯಕ ಅಭಿಯಂತರರು, ಬೆಸ್ಕಾಂ, ಶ್ರೀ ನಂಜುಂಡಪ್ಪ ಹಿರಿಯ ಆರ್ಯೋಗ್ಯ ಪರಿವೀಕ್ಷಕರು, ಶ್ರೀ. ವಿಜಯ ರಾಘವನ್,ಕಿರಿಯ ಆರ್ಯೋಗ್ಯ ಪರಿವೀಕ್ಷಕರು ಹಾಗೂ ಸಂಘ ಸಂಸ್ತೆಗಳ ಕಾರ್ಯದರ್ಶಿಗಳು.

ಮಾನ್ಯ ಅಧ್ಯಕ್ಷರು ಶ್ರೀ ವಿಜಯ ಕುಮಾರ್, ಮುಖ್ಯ ಅಭಿಯಂತರರು ರಾರಾನಗರ ರವರ ಅನುಮತಿ ಮೇರೆಗೆ ಹಾಜರಿದ್ದ ಅಧಿಕಾರಿಗಳ ಜೊತೆ ವಾಡ್.73ರ ವಾರ್ಡ್ ಕಮಿಟಿ ಸಭೆಗೆ ಆಗಮಿಸಿದ್ದ ಸದಸ್ಯ ಕಾರ್ಯದರ್ಶಿರವರು ಉಚ್ಚನ್ಯಾಯಾಲಯದ ಆದೇಶದ ಮೇರೆಗೆ ಪ್ರತಿ ತಿಂಗಳು ವಾರ್ಡ್ ಸಮಿತಿ ಸಭೆಯನ್ನು ನಡೆಸುತ್ತಿದ್ದು ಅದರಂತೆ ಇಂದು ಸಹ ಸಭೆ ನಡೆಸಲಾಗುತ್ತಿದೆ. ಸಭೆಗೆ ಆಗಮಿಸಿದ ಅಧ್ಯಕ್ಷರಿಗೆ ಸ್ವಾಗತ ಕೋರಿ ಹಾಗೂ ಸಭೆಗೆ ಅಗಮಿಸಿದ ಬಿಬಿಎಂಪಿ ಸಿಬ್ಬಂದಿ ವರ್ಗದವರಿಗೆ ಬೇರೆ ಬೇರೆ ಇಲಾಖೆಯ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಸ್ವಾಗತ ಕೋರಿದ ಕಾರ್ಯದರ್ಶಿಗಳು ಹಾಗೂ ಅಧಿಕಾರಿಗಳಿಂದ ಹಾಜರಾತಿ ಪಡೆದು ಸಭೆ ಪ್ರಾರಂಭಿಸಿದರು. ಹಾಗೂ ವಾರ್ಡ್–73ರ ಸಾರ್ವಜನಿಕರ ಕುಂದು ಕೊರತೆಗಳು ಹಾಗೂ ವಾರ್ಡ್ ಅಭಿವೃದ್ಧಿ ಮತ್ತು ಈ ಕೆಳಕಂಡ ವಿವರಗಳನ್ನು ಕುರಿತು ಚರ್ಚಿಸಲಾಯಿತು.

1. ಮುಖ್ಯ ಅಭಿಯಂತರರು ಶ್ರೀ ವಿಜಯ ಕುಮಾರ್ ರವರು ನಾಗರಭಾವಿ 9ನೇ ಬ್ಲಾಕ್ 6ನೇ ಮುಖ್ಯ ರಸ್ತೆ ಗಾಂಧಿ ಪಾರ್ಕ ಹತ್ತಿರ, ಮಲೆಮಹಾದೇಶ್ವರ ಬಡಾವಣೆ ಹತ್ತಿರ, ಕಲ್ಯಾಣ ನಗರ ಸೇತುವೆ ಹತ್ತಿರ ಹಾಗೂ ಸುಮನಹಳ್ಳಿ ಮೇಲು ಸೇತುವೆ ಹತ್ತಿರ ಕಸ ವಿಲೇವಾರಿ ಮಾಡುವ ಬಗ್ಗೆ ಶ್ರೀ. ವಿಜಯ ರಾಘವನ್(ಕಿರಿಯ) ಆರೋಗ್ಯ ಪರಿವೀಕ್ಷಕರು ಹಾಗೂ ಶ್ರೀ ನಂಜುಂಡಪ್ಪ ರವರಿಗೆ ತಿಳಿಸಿರುತ್ತಾರೆ.

2. ಮುಂದುವರೆದು 9ನೇ ಬ್ಲಾಕ್ ನಾಗರಬಾವಿ 12ನೇ ಬಿ ಮೈನ್ ನಲ್ಲಿ ನೀರು ಸರಬರಾಜು ಪೈಪು ಹಾಳಾಗಿದ್ದು, ಬಿ ಡ್ಬ್ಲೂ ಎಸ್ ಎಸ್, ಬಿ ಯ ಸಹಾಯಕ ಅಭಿಯಂತರು ಶ್ರೀ ವಿಶ್ವನಾಥ ನಾಯ್ಕ್ ರವರಿಗೆ ತಿಳಿಸಿರುತ್ತಾರೆ.

3. ಮುಂದುವರೆದು ಬೆಸ್ಕಾಂ ಸಹಾಯಕ ಅಭಿಯಂತರರು ಚನ್ನಪ್ಪ ರವರಿಗೆ, ಪದೇ ಪದೇ ವಿದ್ಯುತ್ ವ್ಯತ್ಯಯದ ಬಗ್ಗೆ ಗಂಭೀರವಾಗಿ ಪರಿಗಣಿಸಲು ತಿಳಿಸಿರುತ್ತಾರೆ.

4. ಈ ಮೇಲಿನ ವಿಷಯಗಳಿಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ ಎಲ್ಲಾ ಕೆಲಸಗಳು ನಿರ್ವಹಿಸುವಂತೆ ಮಾನ್ಯ ಅಧ್ಯಕ್ಷರು ಎಲ್ಲಾ ಅಧಿಕಾರಿಗಳಿಗೆ ಸೂಚಿಸಿದರು.

ಈ ಮೇಲಿನ ವಿಷಯಗಳಿಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ ಎಲ್ಲಾ ಕೆಲಸಗಳು ನಿರ್ವಹಿಸುವಂತೆ ಹಾಗೂ ಮಾನ್ಯ ಅಧ್ಯಕ್ಷರು ಮತ್ತು ಕಾರ್ಯದ್ಯಕ್ಷರು ಸಮಿತಿ ಸಭೆಗೆ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ಸಭೆಗೆ ಹಾಜರಾಗುವಂತೆ ತಿಳಿಸಿ ವಂದನಾರ್ಪಣೆ ಮಾಡಿ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು
ಕೊಟ್ಟಿಗೆಪಾಳ್ಯ ವಾರ್ಡ್–73

ಪ್ರತಿಗಳನ್ನು:-

1. ಮಾನ್ಯ ಆಯುಕ್ತರ, ರವರ ಅವಗಾಹನೆಗೆ ಸಲ್ಲಿಸಲಾಗಿದೆ.
2. ವಾರ್ಡ್ ಸಂಖ್ಯೆ–73ರ ಸಮಿತಿ ಅಧ್ಯಕ್ಷರು.
3. ಮಾನ್ಯ ಜಂಟಿ ಆಯುಕ್ತರು, ರಾರಾನಗರ ವಿಭಾಗ ರವರ ಅವಗಾಹನೆಗೆ ಸಲ್ಲಿಸಲಾಗಿದೆ.
4. ಮಾನ್ಯ ಮುಖ್ಯ ಅಭಿಯಂತರರು, ರಾರಾನಗರ ವಿಭಾಗ ರವರ ಅವಗಾಹನೆಗೆ ಸಲ್ಲಿಸಲಾಗಿದೆ.
5. ಕೌನ್ಸಿಲ್ ಕಾರ್ಯದರ್ಶಿ, ರವರ ಅವಗಾಹನೆಗೆ ಸಲ್ಲಿಸಲಾಗಿದೆ.
6. ಕಾರ್ಯಪಾಲಕ ಅಭಿಯಂತರರು, ರಾರಾನಗರ ವಿಭಾಗ ರವರ ಅವಗಾಹನೆಗೆ ಸಲ್ಲಿಸಲಾಗಿದೆ.
7. ಆರೋಗ್ಯ ಪರಿವೀಕ್ಷಕರು, ಘನತ್ಯಾಜ್ಯ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ, ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ, ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
10. ಪೋಲೀಸ್ ಇನ್ಸಪೆಕ್ಟರ್, ಕಾಮಾಕ್ಷಿಪಾಳ್ಯ ಠಾಣೆ, ನಾಗರಬಾವಿ ರವರ ಮಾಹಿತಿಗಾಗಿ ಸಲ್ಲಿಸಿದೆ.